## ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-1088/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 30/03/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಪರಶುರಾಮ ರಾಮು ಸುರೇಕರ್ (ನಿವೃತ್ತ ಅರಣ್ಯ ರಕ್ಷಕ, ಕಾಕತಿ ವಲಯ), ಶೆಟ್ಟಿಗಲ್ಲಿ, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಪರಶುರಾಮ ರಾಮು ಸುರೇಕರ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ತಾನು ಅರಣ್ಯ ಇಲಾಖೆಯಲ್ಲಿ ಬೆಳಗಾವಿಯ ಅರಣ್ಯ ವಿಭಾಗದಲ್ಲಿ ಅರಣ್ಯ ರಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದಾಗ, ತನ್ನ ತಲೆಗೆ ಪೆಟ್ಟಾಗಿ ವೈದ್ಯಕೀಯ ಉಪಚಾರವನ್ನು ಪಡೆದಿದ್ದು, ಸದರಿ ವೈದ್ಯಕೀಯ ವೆಚ್ಚದ ಬಿಲ್ಲಿನ ಹಣವನ್ನು ಮರುಪಾವತಿ ಮಾಡಬೇಕೆಂದು ಕೋರಿಕೊಂಡಿದ್ದು, ವೈದ್ಯಕೀಯ ವೆಚ್ಚದ ಬಿಲ್ಲಿನ ಮರು ಪಾವತಿಯನ್ನು ಇದುವರೆಗೂ ಮಾಡಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರುಗಳು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ದೂರುದಾರರ ದೂರಿಗೆ ಸಂಬಂಧಿಸದಿಂತೆ ಕಛೇರಿಯ ಎಲ್ಲ ಕಡತಗಳನ್ನು ಹಾಗೂ ಸದರಿ ದೂರುದಾರರ ವೈಯಕ್ತಿಕ ಕಡತಗಳನ್ನು ಪರಿಶೀಲಿಸಲಾಗಿ ಹಾಗೂ ಕಛೇರಿಯ ಆವಕ ಜಾವಕಗಳನ್ನು ಪರಿಶೀಲಿಸಲಾಗಿ, ದೂರುದಾರರು ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ಕೋರಿ ಸಲ್ಲಿಸಿದ ದಾಖಲಾತಿಗಳು ಲಭ್ಯವಿರುವುದಿಲ್ಲ. ಆದ್ದರಿಂದ, ಮೂಲ ದಾಖಲೆಗಳ ಬಗ್ಗೆ ವಿವರಣೆಯನ್ನು ಕಛೇರಿಗೆ ಸಲ್ಲಿಸಿದಲ್ಲಿ, ವೈದ್ಯಕೀಯ ವೆಚ್ಚದ ಪಾವತಿ ಕುರಿತು ನಿಯಮಾನುಸಾರ ಮುಂದಿನ ಕ್ರಮ

ಜರುಗಿಸಲಾಗುವುದೆಂದು ತಿಳಿಸಿರುತ್ತಾರೆ. 2ನೇ ಎದುರುದಾರರು ವಲಯ ಅರಣ್ಯಾಧಿಕಾರಿ, ಕಾಕತಿ ವಲಯ ಇವರಿಗೆ ಪತ್ರ ಬರೆದು, ದೂರುದಾರರ ದೂರಿನ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಂಡು ಆಕ್ಷೇಪಣೆಯನ್ನು ಈ ಸಂಸ್ಥೆಗೆ ಸಲ್ಲಿಸಲು ತಿಳಿಸಿ ಬರೆದಿರುವ ಪತ್ರದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ ಮತ್ತು ದೂರಿನ ಬಗ್ಗೆ ತಮ್ಮ ಯಾವುದೇ ವಿವರವನ್ನು ಸಲ್ಲಿಸಿರುವುದಿಲ್ಲ.

3. ದೂರಿನಂಶಗಳನ್ನು ಎದುರುದಾರರ ಆಕ್ಷೇಪಣೆಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ಕಡತಗಳನ್ನು ಪರಶೀಲಿಸಿದಲ್ಲಿ, ದೂರುದಾರರು ಶಿವ ಕೃಪ ಆಸ್ಪತ್ರೆ, ಬೆಳಗಾವಿ ಇಲ್ಲಿ ತಲೆಯಲ್ಲಿ ಉಂಟಾದ ರಕ್ತಸ್ರಾವಕ್ಕೆ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದು, ಈ ಸಂಬಂಧ ಒಟ್ಟು ರೂ.92,738/– ಮೊತ್ತದ ಹಣ ಸದರಿ ದೂರುದಾರರಿಗೆ ಖರ್ಚಾಗಿರುವುದು ಅವರು ಹಾಜರುಪಡಿಸಿರುವ ದಿ:12/05/2006ರ ಬಿಲ್ಲಿನ ಪ್ರತಿಯಿಂದ ಕಂಡು ಬರುತ್ತದೆ (ಸದರಿ ಬಿಲ್ಲಿನ ಪ್ರತಿಯನ್ನು ಹಾಜರುಪಡಿಸಲಾಗಿದೆ). ದೂರುದಾರರಿಗೆ ಶಿವಕೃಪ ಆಸ್ಪತ್ರೆಯಲ್ಲಿ ಮೆದುಳಿನ ರಕ್ತಸ್ರಾವಕ್ಕೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಬಗ್ಗೆ ಶಿವಕೃಪ ಆಸ್ಪತ್ರೆಯವರು ಪ್ರಮಾಣ ಪತ್ರವನ್ನು ಲೆಟರ್ ಹೆಡ್‌ನಲ್ಲಿ ನೀಡಿದ್ದು, ಅದರ ಪ್ರತಿಯನ್ನು ಹಾಜರುಪಡಿಸಲಾಗಿದೆ. ದಿ:10/07/2006ರ ಪತ್ರದ ಮುಖೇನ ವೈದ್ಯಕೀಯ ವೆಚ್ಚದ ಮರುಪಾವತಿ ಬಗ್ಗೆ ಉಪಅರಣ್ಯಸಂರಕ್ಷಣಾಧಿಕಾರಿ, ಬೆಳಗಾವಿ ಇವರನ್ನು ಕೋರಿಕೊಂಡಿರುವುದು ಕಂಡು ಬರುತ್ತದೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಜಿಲ್ಲಾ ಶಸ್ತ್ರ ಚಿಕಿತ್ಸಕರು ಬೆಳಗಾವಿ ಇವರು ದಿ:10/07/2006ರ ಮುಖೇನ ಉಪಅರಣ್ಯಸಂರಕ್ಷಣಾಧಿಕಾರಿ, ಬೆಳಗಾವಿ ಇವರಿಗೆ ವೈದ್ಯಕೀಯ ಉಪಚಾರದ ವೆಚ್ಚ ದೊರಕಿಸಿಕೊಡಬೇಕೆಂದು ಬರೆದಿರುವ ಪತ್ರದ ಪ್ರತಿಯನ್ನು ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಳಗಾವಿ ಹಾಗೂ ವಲಯ ಅರಣ್ಯಾಧಿಕಾರಿಗಳು, ಕಾಕತಿ ಇವರಿಗೆ ಸಲ್ಲಿಸಿರುವುದು ಕಂಡು ಬರುತ್ತದೆ. ವಲಯ ಅರಣ್ಯಾಧಿಕಾರಿ, ಕಾಕತಿ ಇವರು ದೂರುದಾರರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರಾಗಿರುವ ಬಗ್ಗೆ ಹಾಗೂ ಸದರಿಯವರು ವೈದ್ಯಕೀಯ ವೆಚ್ಚ ಮರುಪಾವತಿಗೆ ಅರ್ಹರಾಗಿರುತ್ತಾರೆಂಬ ಬಗ್ಗೆ ಪ್ರಮಾಣ ಪತ್ರವನ್ನು ನೀಡಿದ್ದು, ಅದರ ಪ್ರತಿಯನ್ನು ಹಾಜರುಪಡಿಸಲಾಗಿದೆ.

4. ಉಪಅರಣ್ಯ ಸಂರಕ್ಷಣಾಧಿಕಾರಿಯವರು ದೂರುದಾರರಿಗೆ ದಿ:04/07/2013 ರಂದು ಪತ್ರ ಬರೆದು, ದೂರುದಾರರು ಕಾಕತಿ ವಲಯದಲ್ಲಿ ಬಸವನಕೊಳ್ಳ ಬೀಟ್ ಸರ್ವೆ ನಂ.2 ಗಂಗೇನಾಳ 76 ರಲ್ಲಿ ಅತಿಕ್ರಮಣ ಬಿಡಿಸುವ ಕಾಲಕ್ಕೆ ದಿ:12/05/2006 ರಂದು ತಲೆಗೆ ಪೆಟ್ಟಾಗಿ ವೈದ್ಯಕೀಯ ಉಪಚಾರವೆಚ್ಚವನ್ನು ಮರುಪಾವತಿಸಲು ವಿನಂತಿಸಿಕೊಂಡಿರುತ್ತೀರೆಂದು, ಆದರೆ, ಸದರಿ ಬಿಲ್ಲುಗಳಲ್ಲಿ ಎಲ್ಲ ನಕಲು ಪ್ರತಿಗಳನ್ನು ಮಾತ್ರ ಸಲ್ಲಿಸಿರುತ್ತೀರೆಂದು, ಆದ್ದರಿಂದ, ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲವೆಂದು, ಕಾರಣ, ಮೂಲ ದಾಖಲಾತಿಗಳೊಂದಿಗೆ ನಿಗಧಿತ ನಮೂನೆಗಳಲ್ಲಿ ವಲಯ

ಅರಣ್ಯಾಧಿಕಾರಿ, ಕಾಕತಿ ಇವರ ಮುಖಾಂತರ ಮನವಿ ಸಲ್ಲಿಸಲು ತಿಳಿಸಿ ಪತ್ರ ಬರೆದಿರುವುದು ಕಂಡು ಬರುತ್ತದೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಇದಕ್ಕೆ ಪ್ರತ್ಯುತ್ತರವಾಗಿ ದೂರುದಾರರು ದಿ:13/08/2013 ರಂದು ಪತ್ರ ಬರೆದು, ತಾವು ಈಗಾಗಲೇ ದಿ: 17/06/2006 ರಂದು ಎಲ್ಲ ವೈದ್ಯಕೀಯ ಅಸಲು ಪ್ರತಿಗಳೊಂದಿಗೆ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆಂದು, ಆದ್ದರಿಂದ, ದಯಮಾಡಿ ತನ್ನ ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್ಲನ್ನು ಪಾಸ್ ಮಾಡಬೇಕೆಂದು ಕೋರಿರುತ್ತಾರೆ ಹಾಗೂ ಈಗಾಗಲೇ ನಿವೃತ್ತಿಯಾಗಿರುತ್ತೇನೆಂದು ತಿಳಿಸಿರುತ್ತಾರೆ.

5. ಆದರೆ, ದೂರುದಾರರು ತಿಳಿಸಿರುವಂತೆ ದಿನಾಂಕ 13/06/2006 ರಂದು ದೂರುದಾರರು ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ಕೋರಿ ಅರ್ಜಿ ಸಲ್ಲಿಸಿದ್ದ ಬಗ್ಗೆ ತೋರಿಸಲು ದಿನಾಂಕ 17/06/2006ರ ಪತ್ರದ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ದಿನಾಂಕದಂದು ದೂರುದಾರರು ವೈದ್ಯಕೀಯ ವೆಚ್ಚದ ಅಸಲು ಪ್ರತಿಗಳನ್ನು ಸಲ್ಲಿಸಿರಲಿಲ್ಲವೆಂದು ಉಪಅರಣ್ಯಸಂರಕ್ಷಣಾಧಿಕಾರಿ, ಬೆಳಗಾವಿ ಇವರು ದಿ:04/07/2013ರ ಪತ್ರದಲ್ಲಿ ತಿಳಿಸಿರುತ್ತಾರೆ. ಸದರಿ ಉಪರಣ್ಯಸಂರಕ್ಷಣಾಧಿಕಾರಿ ತಮ್ಮ ದಿ:04/07/2013ರ ಪತ್ರದಲ್ಲಿ ಉಲ್ಲೇಖದಲ್ಲಿ ದೂರುದಾರರ ದಿ:10/07/2006 ಹಾಗೂ 06/07/2013ರ ಮನವಿಗಳ ಬಗ್ಗೆ ಉಲ್ಲೇಖಿಸಿರುತ್ತಾರೆ. ಆದರೆ, ದೂರುದಾರರು ತಾನು ಎಲ್ಲ ವೈದ್ಯಕೀಯ ವೆಚ್ಚದ ಬಿಲ್ಲುಗಳ ಅಸಲು ಪ್ರತಿಗಳನ್ನು ತಮ್ಮ ಮನವಿಯೊಂದಿಗೆ ದಿ:17/06/2006 ರಂದು ಕಛೇರಿಗೆ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಆದರೆ, ಸದರಿ ದಿನಾಂಕದಂದು (17/06/2006) ಅಸಲು ಪ್ರತಿಗಳೊಂದಿಗೆ ವೈದ್ಯಕೀಯ ವೆಚ್ಚದ ಮರುಪಾವತಿಗೆ ಮನವಿಯನ್ನು ಸಲ್ಲಿಸಿದ್ದರು ಎಂದು ತೋರಿಸಲು ದೂರುದಾರರು ಸದರಿ ಮನವಿಯ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಆದರೆ, ಹಾಜರುಪಡಿಸಿರುವ ದಾಖಲೆಗಳನ್ನು ಹಾಗೂ ದೂರುದಾರರು ಸಲ್ಲಿಸಿರುವ ದಿ:10/07/2006 ಹಾಗೂ 06/07/2013ರ ಮನವಿ ಪತ್ರಗಳನ್ನು ಪರಿಶೀಲಿಸಿದಲ್ಲಿ, ದೂರುದಾರರು ಉಪಅರಣ್ಯಸಂರಕ್ಷಣಾಧಿಕಾರಿಯವರಿಗೆ ಹಾಗೂ ವಲಯ ಅರಣ್ಯಾಧಿಕಾರಿಗಳು, ಕಾಕತಿ ಇವರಿಗೆ ದಿ:10/07/2006 ರಂದು ಮನವಿ ಸಲ್ಲಿಸಿರುವುದು ಸ್ಪಷ್ಟ ಪಡುತ್ತದೆ. ದೂರುದಾರರು ಅಸಲು ವೈದ್ಯಕೀಯ ವೆಚ್ಚಗಳ ಬಿಲ್ಲಿನ ಪ್ರತಿಗಳನ್ನು ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಥವಾ ಜೆರಾಕ್ಸ್ ಪ್ರತಿಗಳನ್ನು ಮಾತ್ರ ಹಾಜರುಪಡಿಸಿದಲ್ಲಿ, ಎದುರುದಾರರು ಸದರಿ ದೂರುದಾರರಿಗೆ ಪತ್ರ ಬರೆದು, ಆ ಸಂದರ್ಭದಲ್ಲೇ ಅಸಲು ಪ್ರತಿಗಳನ್ನು ಹಾಜರುಪಡಿಸುವಂತೆ ಸೂಚಿಸಬಹುದಾಗಿತ್ತು. ಆದರೆ, 2006ನೇ ಇಸವಿಯಿಂದ ಇದುವರೆಗೂ ಅದರ ಬಗ್ಗೆ ಯಾವುದೇ ಕ್ರಮವನ್ನು ಜರುಗಿಸದೇ ಈ ಕಛೇರಿಗೆ ದೂರು ಸಲ್ಲಿಸಿದ ನಂತರ ಸದರಿ ದೂರುದಾರರ ವೈದ್ಯಕೀಯ ವೆಚ್ಚದ ಮರುಪಾವತಿಯ ಕಡತದ ಬಗ್ಗೆ ಪರಿಶೀಲಿಸಿದ್ದು, ಸದರಿ ಕಡತವು ಸಿಗದೇ ಇದ್ದ

ಕಾರಣ, ಅಸಲು ಪ್ರತಿಗಳನ್ನು ಹಾಜರುಪಡಿಸಿ ವೈದ್ಯಕೀಯ ವೆಚ್ಚದ ಮರುಪಾವತಿಗೆ ಅರ್ಜಿಯನ್ನು ಸಲ್ಲಿಸುವಂತೆ ವಲಯ ಅರಣ್ಯಾಧಿಕಾರಿಯವರು ತಮ್ಮ ದಿ:12/12/2016ರ ಪತ್ರದಲ್ಲಿ ತಿಳಿಸಿರುವುದು ಕಂಡು ಬರುತ್ತದೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ದೂರುದಾರರ ವೈದ್ಯಕೀಯ ವೆಚ್ಚದ ಮರುಪಾವತಿಗೆ ದೂರುದಾರರಿಂದ ಲಭ್ಯವಿರುವ ದಾಖಲೆಗಳನ್ನು ಪಡೆದು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ**. ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ **ಅಲ್ಲಿಂದ ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 30/3

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

30/3/17